ವಾಗ್ಧಾರಿ ರಿಬ್ಬನ್‌ಹಳ್ಳಿ ರಾಜ್ಯ ಹೆದ್ದಾರಿ ಸಂಖ್ಯೆ 10ನ್ನು ಮೇಲ್ದರ್ಜೆಗೇರಿಸುವುದು

162(1263) ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಗ್ಧಾರಿ ರಿಬ್ಬನಪಲ್ಲಿ ರಾಜ್ಯ ಹೆದ್ದಾರಿ ಸಂಖ್ಯೆ–10ರ ಉನ್ನತೀಕರಣದ ಯೋಜನಾ ವರದಿಯನ್ನು ಕ ರ ಅ ನಿ ನಿ ದಿಂದ ತಯಾರಿಸಲಾಗಿದೆಯೇ,

ಆ) ಈ ರಸ್ತೆಯ ಉನ್ನತೀಕರಣದ ಅಂದಾಜು ಮೊತ್ತವೆಷ್ಟು, (ವಿವರಗಳನ್ನು ಒದಗಿಸುವುದು),

ಇ) ಸರ್ಕಾರವು ಯಾವಾಗ ಈ ಯೋಜನೆಯನ್ನು ಅನುಮೋದಿಸಿ ಕೈಗೆತ್ತಿಕೊಳ್ಳುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು

ಆ) ಹಾಲಿ ವಾಗ್ಧಾರಿ–ರಿಬ್ಬನಪಲ್ಲಿ ರಾಜ್ಯ ಹೆದ್ದಾರಿ–10ನ್ನು ಅಭಿವೃದ್ಧಿಪಡಿಸಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಯೋಜನಾ ವರದಿಯನ್ನು ತಯಾರಿಸಲಾಗಿದೆ ಅಭಿವೃದ್ಧಿಗಾಗಿ ತೆಗೆದುಕೊಂಡ ಯೋಜನೆಯ ಉದ್ದ 140 ಕಿಮೀ ಮತ್ತು ಅಂದಾಜು ಮೊತ್ತ ರೂ 193 90 ಕೋಟಿಗಳು

ಇ) ಈ ಯೋಜನೆಯ ಯೋಜನಾ ವರದಿಯು ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆ

ವಿಧಾನಸಭೆಯ ಸದಸ್ಯರಾದ ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 1263ಕ್ಕೆ ಪೂರಕ ಟಿಪ್ಪಣಿ

ಗುಲ್ಬರ್ಗಾ ಜಿಲ್ಲೆಯಲ್ಲಿನ ವಾಗ್ಧಾರಿ–ರಿಬ್ಬನಪಲ್ಲಿ (ಸರಸಾಂಬ–ರಿಬ್ಬನ್‌ಪಲ್ಲಿ) ರಾಜ್ಯ ಹೆದ್ದಾರಿಯು ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ ರಾಜ್ಯಗಳ ನಡುವೆ ಸಂಪರ್ಕ ಕಲ್ಪಿಸುವ ಮುಖ್ಯ ರಾಜ್ಯ ಹೆದ್ದಾರಿಯಾಗಿದ್ದು ರಸ್ತೆಯ ಬಹುಭಾಗವು ಏಕಪಥ ಮತ್ತು ಮಧ್ಯಂತರ ಪಥ ರಸ್ತೆಯಿದ್ದು ರಸ್ತೆಯು ದುಸ್ಥಿತಿಯಲ್ಲಿರುತ್ತದೆ ಈ ರಸ್ತೆಯಲ್ಲಿ ವಾಹನಗಳ ಸಂಚಾರವು ತುಂಬಾ ಇರುವುದರಿಂದ ರಸ್ತೆಯನ್ನು ಅಭಿವೃದ್ಧಿಗೊಳಿಸುವುದು ತುಂಬಾ

ಅವಶ್ಯವಾಗಿರುತ್ತದೆ ಆದ್ದರಿಂದ ಈ ರಸ್ತೆಯ ಅಗಲೀಕರಣ ಮತ್ತು ಬಲಪಡಿಸುವ ಕಾಮಗಾರಿಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಮುಖಾಂತರ B O T ಆಧಾರದ ಮೇಲೆ ತೆಗೆದುಕೊಳ್ಳಲು ನಿರ್ಧರಿಸಿರುವುದು

ಈ ನಿಟ್ಟಿನಲ್ಲಿ ಈ ರಸ್ತೆಯ ಅಭಿವೃದ್ಧಿಗಾಗಿ ವಿವರವಾದ ಯೋಜನ ವರದಿಯನ್ನು ತಯಾರಿಸಲು ಸಮಾಲೋಚಕರನ್ನು ನೇಮಿಸಲಾಗಿತ್ತು ಸಮಾಲೋಚಕರು ಈ ರಸ್ತೆಯ ಅಭಿವೃದ್ಧಿಯ ಯೋಜನಾ ವರದಿಯನ್ನು ತಯಾರಿಸಿರುವರು

ಅಭಿವೃದ್ಧಿಗಾಗಿ ತೆಗೆದುಕೊಳ್ಳಲು ಯೋಜಿಸಿರುವ ರಸ್ತೆಯ ಒಟ್ಟು ಉದ್ದ 140 00 ಕಿಮೀ ಹಾಲಿ ರಸ್ತೆಯನ್ನು 7 ಮೀ ಅಗಲದ ಎರಡು ಪಥದ ರಸ್ತೆಯನ್ನಾಗಿ ಮಾಡಲು ಯೋಜಿಸಿದ್ದು ರಸ್ತೆಯ ಎರಡು ಬದಿಗೂ 2 5 ಮೀ ಅಗಲದ ಮಣ್ಣಿನ ಬದಿಗಳನ್ನು ಅಳವಡಿಸಲು ಯೋಜಿಸಲಾಗಿದೆ

ಈ ರಸ್ತೆಯಲ್ಲಿನ ಸೇತುವೆ ಮತ್ತು ಅಡ್ಡ ಮೋರಿಗಳ ಪುನರ್ ನಿರ್ಮಾಣ/ನಿರ್ವಹಣೆ ಕೂಡಾ ಯೋಜಿಸಲಾಗಿದ್ದು ಜನವಸತಿ ಮತ್ತು ಪಟ್ಟಣ ಪ್ರದೇಶ ಪರಿಮಿತಿಯಲ್ಲಿ ರಸ್ತೆಯ ಎರಡು ಬದಿಗಳಿಗೂ ಪಕ್ಕಾ ಚರಂಡಿ ನಿರ್ಮಾಣ ಮಾಡಲು ಯೋಜಿಸಲಾಗಿದೆ

ಈ ರಸ್ತೆಯ ವಿನ್ಯಾಸವನ್ನು ಮುಂದಿನ 20 ವರ್ಷಗಳಲ್ಲಿ ಬರಬಹುದಾದ ವಾಹನ ಸಾಂದ್ರತೆಯನ್ನಾಧರಿಸಿ ಮಾಡಲಾಗಿದೆ ಈ ರಸ್ತೆಯ ಅಭಿವೃದ್ಧಿಗಾಗಿ ತಗಲುವ ಒಟ್ಟು ವೆಚ್ಚ ರೂ 193 90 ಕೋಟಿಗಳಾಗಿರುತ್ತವೆ ಈ ರಸ್ತೆಯನ್ನು ಬಿ ಒ ಟಿ ಆಧಾರದ ಮೇಲೆ ತೆಗೆದುಕೊಳ್ಳಲು ಸಾಧ್ಯವಿಲ್ಲದಿರುವುದ ರಿಂದ ಈ ಯೋಜನೆಯನ್ನು ಸರ್ಕಾರದ ಅನುದಾನದಲ್ಲಿ ಕೈಗೊಳ್ಳ ಬೇಕಾಗಿರುತ್ತದೆ ಈ ಕಾಮಗಾರಿಯ ಯೋಜನಾ ವರದಿಯು ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್. ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ ಆದರೆ ಈ ರಸ್ತೆಯ ವಿಷಯವನ್ನು ಪ್ರಸ್ತಾಪವನ್ನು ಮಾಡಿದ್ದೇನೆ ಈ ಹೆದ್ದಾರಿಯಲ್ಲಿರುವಂತಹ ರಸ್ತೆ, ಗುಲ್ಬರ್ಗಾ ಜಿಲ್ಲೆಯಲ್ಲಿ 5 ಮತ ಕ್ಷೇತ್ರಗಳಿಗೆ ಸಂಬಂಧಪಡುವಂತಹ ರಸ್ತೆಯಾಗಿದೆ ಇದು ಅಳಂದ, ಚಿತ್ತಾಪುರ್, ಅಫಜಲ್‌ಪುರ್, ಗುಲ್ಬರ್ಗಾ ಮತ್ತು ಸೇಡಂ ಆಂಧ್ರ

ಪ್ರದೇಶದಿಂದ ಮಹಾರಾಷ್ಟ್ರ ಗಡಿಯವರೆಗೆ ಪ್ರಮುಖವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ಅತಿ ಹೆಚ್ಚಿನ ವಾಹನಗಳು ತಿರುಗಾಡುವಂತಹ ರಸ್ತೆಯಾಗಿದೆ ಈಗಾಗಲೇ ಸದನದಲ್ಲಿ ಬಜೆಟ್‌ನಲ್ಲಿ BOT ಆಧಾರದ ಮೇಲೆ ತೆಗೆದುಕೊಳ್ಳುತ್ತೇವೆಂದು Finance Minister ಹೇಳಿದ್ದಾರೆ KRDCL ನಿಂದ ಈಗಾಗಲೇ ಅದರ ಬಗ್ಗೆ 193 ಕೋಟಿಗೆ estimate ಆಗಿದೆ BOTಯಲ್ಲಿ ಅದು viable ಆಗುವುದಿಲ್ಲ ಅದಕ್ಕೆ ಸರ್ಕಾರದಿಂದಲೇ ಅನುದಾನವನ್ನು ಒದಗಿಸಬೇಕೆಂಬ ಪ್ರಸ್ತಾವನೆಯನ್ನು ಲೋಕೋಪಯೋಗಿ ಇಲಾಖೆಗೆ KRDCL ಇದರಲ್ಲಿ ಕಳುಹಿಸಿದ್ದಾರೆ ಆದರೆ ಇಲ್ಲಿ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಸಚಿವರು ಹೇಳುತ್ತಾರೆ ಇದಕ್ಕೆ ನಿರ್ದಿಷ್ಟವಾದಂತಹ ಆಶ್ವಾಸನೆಯನ್ನು ಸದನದಲ್ಲಿ ಕೊಡಬೇಕು ಏಕೆಂದರೆ ಇದು Finance Department ನಲ್ಲಿ clear ಆಗಬೇಕು BOTನಲ್ಲಿ ಇದು Viable ಆಗುವುದಿಲ್ಲವೆಂದರೆ ಸರ್ಕಾರ ಇದಕ್ಕೆ ಅನುದಾನವನ್ನು ಕೊಟ್ಟು ಇವತ್ತು ನಾವು ಅದನ್ನು ಅಭಿವೃದ್ಧಿಯನ್ನು ಮಾಡುತ್ತೇವೆಂಬ ಬಗ್ಗೆ ಇವತ್ತು ಲೋಕೋಪಯೋಗಿ ಸಚಿವರು ಮತ್ತು ಮುಖ್ಯಮಂತ್ರಿಗಳು ಈ ಸದನದಲ್ಲಿ ಆಶ್ವಾಸನೆಯನ್ನು ಕೊಡಬೇಕು

ಏಕೆಂದರೆ ಗುಲ್ಬರ್ಗಾ ಜಿಲ್ಲೆಯಲ್ಲಿಯೇ ಈ ರಸ್ತೆ ಅತಿ ಪ್ರಮುಖವಾದ ರಸ್ತೆಯಾಗಿದೆ ಈ ರಸ್ತೆ ಯಲ್ಲಿ ಎಲ್ಲಾ ಸಿಮೆಂಟ್ ಫ್ಯಾಕ್ಟರಿ ಸಾಮಗ್ರಿಗಳು ಹಾಗೂ ತೊಗರಿ ಸಾಗಾಣಿಕೆಯಾಗುತ್ತಿದೆ ಇದೊಂದು ಪ್ರಮುಖ ರಸ್ತೆಯಾಗಿ ಇವತ್ತು ಎಲ್ಲಾ 4–5 ಶಾಸಕರ ಕ್ಷೇತ್ರಗಳನ್ನೊಳಗೊಂಡ ಈ ರಸ್ತೆ ಬಹಳ ದುಸ್ಥಿತಿಯಲ್ಲಿದೆ ಇವತ್ತು ನಮ್ಮ ಮತಕ್ಷೇತ್ರಕ್ಕೆ ಈ ರಸ್ತೆಯಲ್ಲಿ ಹೋಗುವುದಕ್ಕಾಗುವುದಿಲ್ಲ ಅಷ್ಟೊಂದು ದುಸ್ಥಿತಿಯಲ್ಲಿದೆ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸಚಿವರು ಈ ರಸ್ತೆ ದುರಸ್ತಿಗೆ ಸರ್ಕಾರದಿಂದ ಅನುದಾನ ಕೊಡುತ್ತೇವೆಂದು ಈ ಸದನದಲ್ಲಿ ಆಶ್ವಾಸನೆಯನ್ನು ನೀಡಬೇಕೆಂದು ತಮ್ಮ ಮೂಲಕ ಗಮನಕ್ಕೆ ತರಬಯಸುತ್ತೇನೆ

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) ಈಗ ಈ ರಸ್ತೆ BOT ಮೇಲೆ ತೆಗೆದುಕೊಳ್ಳಬೇಕು ಆದರೆ BOT feasible ಇಲ್ಲವೆಂದು ಮಾನ್ಯ ಸದಸ್ಯರು ಸದನದ ಗಮನಕ್ಕೆ ತಂದಿದ್ದಾರೆ ರಾಜ್ಯದಲ್ಲಿ ಸುಮಾರು ರಾಜ್ಯ ಹೆದ್ದಾರಿ ರಸ್ತೆ 17 ಸಾವಿರ ಕಿ ಮೀ ಇದೆ ಅದರಲ್ಲಿ ಕೆಲವು ಭಾಗಗಳಲ್ಲಿ, ಉದಾಹರಣೆಗೆ ಬೀದರ್‌ನಿಂದ ಮಹಾರಾಷ್ಟ್ರಕ್ಕೆ ಹೋಗುವ

ಬಾರ್ಡರ್ ರಸ್ತೆ, ಇಂತಹ ರಸ್ತೆಗಳಲ್ಲಿ ಹಲವಾರು ರಸ್ತೆಗಳು ಇವೆ ಮಾನ್ಯ ಸದಸ್ಯರು ಹೇಳಿರುವಂತೆ ಹಣಕಾಸಿನ ಲಭ್ಯತೆ ಮೇಲೆ ಪರಿಶೀಲಿಸಿ ಹಣ ಒದಗಿಸುತ್ತೇವೆ

ಶ್ರೀ ಮಲ್ಲಿಕಾರ್ಜುನ್ ಖರ್ಗೆ ಈಗ ಏನಾಗುತ್ತದೆಯೆಂದರೆ, ಮೂರು ರಸ್ತೆಗಳು ಬಹಳ ಮಹತ್ವವಾದ ರಸ್ತೆಗಳು, ಇದನ್ನು ಮಾನ್ಯ ಮಂತ್ರಿಗಳು ಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದಾರೆ ಈಗ ಹಣದ ಲಭ್ಯತೆ ಇಲ್ಲವೆಂದು ಹೇಳುತ್ತಿದ್ದಾರೆ ಇವು ultimately ಸಾಲ ತೆಗೆದುಕೊಂಡು ಮಾಡತಕ್ಕಂಥ ರಸ್ತೆಗಳು ಬಜೆಟ್ಟಿನಲ್ಲಿ ಸಂಪೂರ್ಣವಾಗಿ ಹಣ ಇಟ್ಟುಕೊಂಡು ಮಾಡುವಂತಹ ರಸ್ತೆಗಳಲ್ಲ ವಿಶೇಷವಾಗಿ ಕೆ ಆರ್ ಡಿ ಸಿ ಯಿಂದ ಆಗುವ ರಸ್ತೆ ಅದರಲ್ಲಿ ಒಂದು ವಾಗ್ಧರಿಯಿಂದ ರಿಬ್ಬನ್‌ಪಲ್ಲಿ ಅಂದರೆ ಆ ಕಡೆ ಮಹಾರಾಷ್ಟ್ರ, ಸೊಲ್ಲಾಪುರಕ್ಕೆ ಅನುಕೂಲವಾಗುತ್ತದೆ ಬಾರ್ಡರ್ ಏರಿಯಾ, ಈ ಕಡೆ ಆಂಧ್ರಕ್ಕೆ ಲಿಂಕ್ ಆಗುವಂಥಾದ್ದು, ಎರಡೂ ಹೈವೇಗೆ ಲಿಂಕ್ ಆಗುವಂಥ ರಸ್ತೆಯಿದು ವಾಗ್ಧರಿ ಮತ್ತು ಅಳಂದಾ ತಾಲ್ಲೂಕು, ಗುಲಬರ್ಗಾ, ಚಿತ್ತಾಪುರ, ಸೇಡಂ ಇಷ್ಟೊಂದು ತಾಲ್ಲೂಕುಗಳಿಗೆ ಅನುಕೂಲವಾಗುವಂಥ ರಸ್ತೆಯಿದು ಎರಡನೇ ರಸ್ತೆ ಗುಲ್ಬರ್ಗಾದಿಂದ ವಾಡಿ, ರಾಯಚೂರು ಇದು ಕೂಡ district to district ಗೆ ಲಿಂಕ್ ಆಗತಕ್ಕಂಥ ಒಂದು ರಸ್ತೆಯಿದೆ ಮೂರನೆಯ ರಸ್ತೆ ಎಂದರೆ ವಿಶೇಷವಾಗಿ ನಮ್ಮ ಅಫ್ಜಲ್‌ಪುರದಿಂದ ಗುಲ್ಬರ್ಗಾಗೆ ಇದೆ ಅಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಾಸ್ತವ್ಯ ಮಾಡಿದಾಗ ಅದನ್ನು ಹೇಳಿದ್ದರಂತೆ, ಹೆಚ್ಚು ಕಡಿಮೆ ಅದನ್ನು ಈಗ ತೆಗೆದುಕೊಂಡಿದ್ದಾರೆ ನಾವು ಹೇಳಿದ್ದು ಮೂರು, ಒಂದು ಚಿಂಚೋಳಿಯಿಂದ ಯಾದಗಿರ್, ಕಂಪ್ಲಿ ಮತ್ತು ಇವೆರಡೂ, ವಾಗ್ಧರಿಯಿಂದ ರಿಬ್ಬನ್‌ಪಲ್ಲಿ ಮತ್ತು ಎರಡನೆಯದಾಗಿ ರಾಯಚೂರಿನಿಂದ ವಾಡಿ ಇವು ಮೂರು ಕೂಡ ಸೇರಿಸಿದರೆ, ಖಂಡಿತವಾಗಿ Inter state economy ಆಗುತ್ತದೆ ದೊಡ್ಡ ಪಟ್ಟಣ ಈ ಕಡೆ ಪೂನಾ, ಶೋಲಾಪುರ, ಬಾಂಬೆ ಆಗಬಹುದು, ಈ ಕಡೆ ಹೈದ್ರಾಬಾದ್‌ಗೆ ಲಿಂಕ್ ಆಗುತ್ತದೆ, ಈ ಕಡೆ ಬೆಂಗಳೂರಿಗೆ ಲಿಂಕ್ ಆಗುತ್ತದೆ ಅದಕ್ಕೆ ದಯವಿಟ್ಟು ನೀವು ಏನು ಸೇರಿಸಿಕೊಂಡಿರಿ ಹಾಗೆ ನಮಗೂ ಆ ಮೂರು ರಸ್ತೆಗಳನ್ನು ಸೇರಿಸಿಕೊಡಿ ಅದರಿಂದ ನನಗೇನು ಲಾಭವಾಗುವುದಿಲ್ಲ ಲಾಭವಾಗುವುದು ವಿಶ್ವನಾಥ್, ಅಫ್ಜಲ್‌ಪುರ ಶಾಸಕರಿಗೆ ಮಾತ್ರ, ಬೇರೆ ನಮಗೇನು ಸಂಬಂಧ ಬರುವುದಿಲ್ಲ

ದಯವಿಟ್ಟು ಇದನ್ನು ಒಪ್ಪಿಕೊಂಡು ಈ ಬಜೆಟ್ಟಿನಲ್ಲಿ ಈ ಕೆಲಸಗಳನ್ನು ಸೇರಿಸಬೇಕೆಂದು ನಾನು ಕೋರುತ್ತೇನೆ

ಅಧ್ಯಕ್ಷರು ನಿಮ್ಮೆಲ್ಲರ ಪರವಾಗಿ ಬಹಳ ದೀರ್ಘವಾಗಿ ಉಪ ಪ್ರಶ್ನೆಯನ್ನು ಮಲ್ಲಿಕಾರ್ಜುನ್ ಖರ್ಗೆಯವರು ಕೇಳಿದ್ದಾರೆ

ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್ ಮುಖ್ಯಮಂತ್ರಿಗಳು ಗುಲ್ಬರ್ಗಾಗೆ ಬಂದಾಗ ಇದು ಕ್ಯಾಬಿನೆಟ್‌ಗೆ ಬರುತ್ತದೆ, ಬಂದಾಗ ಅಪ್ರೂವ್ ಮಾಡಿಕೊಡುವುದಾಗಿ ಹೇಳಿದ್ದಾರೆ ಹಾಗಾಗಿ ತಾವು ಸ್ವಲ್ಪ ಹಣಕಾಸಿನ ಸಚಿವರಲ್ಲಿ ಒತ್ತಾಯ ಮಾಡಬೇಕು ಇದು ಬಹಳ ಮುಖ್ಯವಾದ ರಸ್ತೆಯಾಗಿದೆ 140 ಕಿ ಮೀ ರಸ್ತೆಯಾಗಿದ್ದು ಮೂರ್ನಾಲ್ಕು constituencyಗೆ ಹಾದು ಹೋಗುತ್ತದೆ ಕಮರ್ಷಿಯಲ್ ಆಕ್ಟಿವಿಟೀಸ್‌ಗೆ ಬಹಳ important road ಆಗುತ್ತದೆ ಹಾಗಾಗಿ ತಾವು ದಯಮಾಡಿ ಇದನ್ನು ಏನಾದರೂ ಮಾಡಿ ಕ್ಲಿಯರ್ ಮಾಡಿ ಅಪ್ರೂವ್ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ

ಶ್ರೀ ವೈಜನಾಥ್ ಪಾಟೀಲ್ ನ್ಯಾಷನಲ್ ಹೈವೇ 9, ಇದನ್ನು ಸೇರಿಸಬೇಕೆಂದು ವಿನಂತಿಸುತ್ತೇನೆ

ಶ್ರೀ ಬಿ ಆರ್ ಪಾಟೀಲ್ ಸರ್ಕಾರದ ಮುತುವರ್ಜಿಯಿಂದ ಇದು ಪ್ರಾರಂಭವಾದ ಯೋಜನೆಯಿದು ಈ ಸರ್ಕಾರ ತೆಗೆದುಕೊಳ್ಳುತ್ತಾರೆಂದು ನಮಗೆ ಭರವಸೆ ಮೂಡಿತ್ತು ಒಂದು ಕೆ ಆರ್ ಡಿ ಸಿ ಯವರು ಪ್ರಾಜೆಕ್ಟ್ ಮಾಡಿದಾಗ 40% ಸರ್ಕಾರ ಭಾಗ ಮಾಡುವುದು, ಉಳಿದ 60% ಪ್ರೈವೇಟ್ ಪಾರ್ಟಿಸಿಪೇಷನ್ ಮಾಡಿ, ಏನಾದರೂ ಮಾಡಿ ತೆಗೆದುಕೊಳ್ಳಬೇಕೆಂದು ಪ್ರಸ್ತಾವನೆ ಇತ್ತು ಆಮೇಲೆ ಅದನ್ನು ವಯಬಲ್ ಆಗುವುದಿಲ್ಲವೆಂದು ಕೈಬಿಟ್ಟರು ನಾನು ಒಂದೇ ಪಾಯಿಂಟ್ ಹೇಳುತ್ತೇನೆ, ಈ ಬಗ್ಗೆ ಮಾನ್ಯ ಖರ್ಗೆಯವರು ಹೇಳಿದ್ದಾರೆ ಗುಲ್ಬರ್ಗಾದಲ್ಲಿ 8 ಸಿಮೆಂಟ್ ಕಟ್ಟಡಗಳು ಇವೆ ಇಡೀ ತೊಗರಿಬೇಳೆಯ ಎಲ್ಲಾ ವ್ಯಾಪಾರಿಗಳು ಈ ರಸ್ತೆಗೆ ಬೇಡಿಕೆಯನ್ನಿಟ್ಟಿದ್ದಾರೆ ಇವತ್ತು ಯಾರೂ ಕೂಡ ಉದ್ದಿಮೆಯನ್ನು ಸ್ಥಾಪನೆ ಮಾಡಲಿಕ್ಕೆ ಬರುತ್ತಿಲ್ಲ, ಕಾರಣ ಈ ರಸ್ತೆ ಸರಿಯಿಲ್ಲ, ಹೈದ್ರಾಬಾದ್‌ನವರು ಬರುತ್ತಿಲ್ಲ, ಈ ಕಡೆ ಮಹಾರಾಷ್ಟ್ರದವರು ಬರುತ್ತಿಲ್ಲ ಹೀಗಾಗಿ ವ್ಯಾಪಾರ ಉದ್ದಿಮೆಗೆ ಪ್ರವಾಸಕ್ಕೆ ಬಹಳ ತೊಂದರೆಯಾಗಿದೆ, ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಛೇಂಬರ್ಸ್ ಆಫ್ ಕಾಮರ್ಸ್‌ನವರು ಅವರಿಗೆ ಸನ್ಮಾನ ಮಾಡಿದ್ದರು ಮಾನ್ಯ

ಮುಖ್ಯಮಂತ್ರಿಗಳು ಆಗ ಮಾತು ಕೊಟ್ಟು ಬಂದಿದ್ದೀರಿ, ಯಾವುದೇ ಕಂಡಿಷನ್‌ನಲ್ಲಿಯೂ ಈ ರಸ್ತೆಯನ್ನು ತೆಗೆದುಕೊಳ್ಳುವುದಾಗಿ ಹೇಳಿದ್ದಿರಿ ದಯಮಾಡಿ ಸರ್ಕಾರ ಕೊಟ್ಟಂಥ ಮಾತನ್ನು ಉಳಿಸಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ

ಅಧ್ಯಕ್ಷರು ಲೋಕೋಪಯೋಗಿ ಸಚಿವರು, ಉತ್ತರ ಹೇಳಿ

ಶ್ರೀ ಹೆಚ್ ಡಿ ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ್ ಖರ್ಗೆಯವರು ಹೇಳಿದಂತಹ ರಸ್ತೆಯನ್ನು ತೆಗೆದುಕೊಂಡಿದ್ದೇವೆ ಯಾದಗಿರ್ ಷಹಾಪುರ್ ರಸ್ತೆಯನ್ನು ತೆಗೆದುಕೊಂಡಿದ್ದೇವೆ ಇದನ್ನು ಸ್ವಲ್ಪ ಹಣಕಾಸಿನ ಪರಿಸ್ಥಿತಿ ನೋಡಿ ಸಾಹೇಬರ ಜೊತೆಯಲ್ಲಿ, ಹಣಕಾಸಿನ ಸಚಿವರೊಂದಿಗೆ ಮಾತನಾಡಿ ಪರಿಶೀಲನೆ ಮಾಡುತ್ತೇವೆ

ತಿರುವು ಹಾಗೂ ಸೇತುವೆಯನ್ನು ಅಗಲಗೊಳಿಸುವುದು

163(1259) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ–ಸವಣೂರ ತಾಲ್ಲೂಕುಗಳಲ್ಲಿ ಸನ್ 2004–05, 2005–06, 2006–07ನೇ ಸಾಲಿನಲ್ಲಿ ಯಾವ ಯಾವ ಯೋಜನೆಗಳ ಅಡಿಯಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಕಾಮಗಾರಿಗಳು ಈಗ ಯಾವ ಹಂತದಲ್ಲಿದೆ,

ಆ) ಕಾಮಗಾರಿಗಳನ್ನು ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ (ಮಾಹಿತಿ ಒದಗಿಸುವುದು),

ಇ) ಕಾರವಾರ–ಇಳಕಲ್ ರಾಜ್ಯ ಹೆದ್ದಾರಿಯ 90 ತಿರುವಿನಲ್ಲಿರುವುದರಿಂದ ವಾಹನಗಳ ಅಪಘಾತಗಳನ್ನು ತಪ್ಪಿಸಲು ತಿರುವನ್ನು ಸೂಕ್ತವಾಗಿ ಅಗಲೀಕರಣ ಮಾಡಲು ಹಾಗೂ ಹಾಲಿ ಇರುವ ಸೇತುವೆಯನ್ನು ಅಗಲಗೊಳಿಸುವ ಬಗ್ಗೆ ಪರಿಶೀಲನೆ ಮಾಡಲಾಗುತ್ತದೆಂದು ಈವರೆಗೂ ಕಾರ್ಯರೂಪಕ್ಕೆ ಬರದೇ ಇರುವುದು ಕಾರಣವೇನು,

ಈ) ಹಾಗಿದ್ದಲ್ಲಿ, ಸರಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ?